## ಕರ್ನಾಟಕ ವಿಧಾನ ಪರಿಷತ್ತು

### ಶ್ರೀ ಪ್ರಕಾಶ್ ಕೆ ರಾಠೋಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಮಂಡಿಸಿರುವ ಶೂನ್ಯವೇಳೆ ರಡಿ ನೀಡಿರುವ ಸೂಚನೆಯ ಬಗ್ಗೆ.

**ಪ್ರಶ್ನೆ:**

ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ (ಪ್ರಸ್ತುತ ನಿಡಗುಂದಿ ತಾಲ್ಲೂಕು) ಜಿಲ್ಲೆಯಲ್ಲಿಯೇ 2ನೇ ಅತಿ ದೊಡ್ಡದಾದ ಆರೇಶಂಕರ ಕೆರೆಯ ಜೀರ್ಣೋದ್ಧಾರದ ಅಭಿವೃದ್ಧಿಗೆ ಯೋಜನೆ ರೂಪಿಸುವ ಬಗ್ಗೆ.

**ಉತ್ತರಗಳು:**

ವಿಜಯಪುರಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ (ಪ್ರಸ್ತುತ ನಿಡಗುಂದಿ ತಾಲ್ಲೂಕು) ಆರೇಶಂಕರ ಮಧ್ಯಮ ನೀರಾವರಿ ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಕೆರೆಯ ಏರಿಯ ಉದ್ದ 1417 ಮೀಟರ್, ಗರಿಷ್ಟ ಎತ್ತರ 14.32 ಮೀಟರ್, ಅಚ್ಚುಕಟ್ಟು ಪ್ರದೇಶ 1255 ಹೆಕ್ಟೇರ್, ಕೆರೆ ಅಂಗಳದ ವಿಸ್ತೀರ್ಣ 225 ಹೆಕ್ಟೇರ್ ಮತ್ತು ನೀರು ಸಂಗ್ರಹಣ ಸಾಮರ್ಥ್ಯ 302.93 ಎಂ.ಸಿ.ಎಫ್.ಟಿ. ಈ ಕೆರೆಯು ಬಲಗಾಲುವೆಯನ್ನು (ರೈಟ್‌ಬ್ಯಾಂಕ್‌ಕೆನಾಲ್) ಹೊಂದಿದ್ದು, ಅದರ ಉದ್ದ 13.00 ಕಿ.ಮೀ. ಗಳಾಗಿರುತ್ತದೆ.

ಸದರಿ ಕೆರೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವ್ಯಾಪ್ತಿಯಲ್ಲಿನ ಚಿಮ್ಮಲಗಿ ಏತ ನೀರಾವರಿಯೋಜನೆಯಡಿ ನೀರನ್ನು ತುಂಬಿಸಲಾಗುತ್ತಿದೆ. ಈ ಕೆರೆಯ ನೀರನ್ನು ಬಹು ಹಳ್ಳಿ ಕುಡಿಯುವ ನೀರಿನ ಯೋಜನೆಯಡಿ 32 ಗ್ರಾಮಗಳಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಸದರಿ ಕೆರೆಯ ನಿರ್ವಹಣೆಯನ್ನು ಯೋಜನೇತರ ಲೆಕ್ಕಶೀರ್ಷಿಕೆ 2701-55-101-0-01-200 ರಡಿ ಕೈಗೊಳ್ಳಲಾಗುತ್ತಿದ್ದು, 2023-24ನೇ ಸಾಲಿನಲ್ಲಿ ಸದರಿ ಕೆರೆಯ ನಿರ್ವಹಣೆಗಾಗಿ ಅನುದಾನ ಲಭ್ಯವಾಗದ ಕಾರಣ, ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗಿರುವುದಿಲ್ಲ.

ಪ್ರಸ್ತುತ ವರ್ಷ ಸದರಿ ಕೆರೆಯ ನಿರ್ವಹಣೆಗಾಗಿ ಒದಗಿಸಲಾಗುವ ಅನುದಾನದಡಿ ಆದ್ಯತೆಯ ಮೇಲೆ ಜಾಲಿ ಕಂಟಿಗಳನ್ನು ಕಡಿಸುವ ಕೆಲಸವನ್ನು ಆದ್ಯತೆಯ ಮೇಲೆ ಕೈಗೊಳ್ಳಲಾಗುವುದು. ಸದರಿ ಕೆರೆಯನ್ನು ಕುಡಿಯುವ ನೀರಿಗಾಗಿ ಉಪಯೋಗಿಸಲಾಗುತ್ತಿರುವುದರಿಂದ ಕೆರೆಯಲ್ಲಿ ಸತತವಾಗಿ ನೀರು ಸಂಗ್ರಹವಾಗಿರುವುದರಿಂದ ಹೂಳು ತೆಗೆಯುವ ಕೆಲಸವನ್ನು ಕೈಗೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ.

**ಕಡತ ಸಂಖ್ಯೆ: MID/71/LCQ/2024**

(ಎನ್.ಎಸ್ ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು